**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭದ್ರಾವತಿ**

**ಸಿ.ಸಿ.ನಂ.1588/2023**

ಪಿರ್ಯಾದಿಃ ನಾಗರಾಜ

**ವಿರುದ್ಧ**

ಆರೋಪಿಃ ಕೃಷ್ಣ ಕುಮಾರ ಯಾನೆ ಪಾಪಣ್ಣ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಮಾಡಿಕೊಳ್ಳಬೇಕಾದ ಆರೋಪಿಯ ವಿಚಾರಣೆ**

ಪ್ರಶ್ನೆ.1. ನೀವು ಪಿರ್ಯಾದುದಾರರು ಪಿ.ಡಬ್ಲ್ಯೂ-1 ರಂತೆ ನುಡಿದಿರುವ ಇವರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ.2. ಫ್ರಾಸಾ-1 ಎಸ್ ಎಂ ನಾಗರಾಜ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ 28.09.2022 ರಂದು ರೂ.4,50,000/- ಹಣವನ್ನು ಹಣಕಾಸಿನ ಅಗತ್ಯತೆಗಾಗಿ ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ವಾಪಾಸು ಕೊಡುವುದಾಗಿ ಹೇಳಿ ನಿಮ್ಮ ಖಾತೆಗೆ ಸೇರಿದ ಕೆನರಾ ಬ್ಯಾಂಕ್ ಸಿ ಎನ್ ರಸ್ತೆ ಶಾಖೆ ಭದ್ರಾವತಿ ಗೆ ಸೇರಿದ ಚೆಕ್ ನಂ.740707 ನ್ನು ದಿನಾಂಕ 06.03.2023 ಕ್ಕೆ ರೂ.4,50,000/- ರೂ ಎಂದು ನಮೂದು ಮಾಡಿ ಫಿರ್ಯಾದುದಾರರಿಗೆ ನೀಡಿದ್ದು, ಪಿರ್ಯಾದುದಾರರು ಚೆಕನ್ನು ನಗದೀಕರಣಕ್ಕಾಗಿ ತನ್ನ ಖಾತೆ ಇರುವ ಕೆನರಾ ಬ್ಯಾಂಕ್ ಸಿ ಎನ್ ರಸ್ತೆ ಶಾಖೆ ಭದ್ರಾವತಿ ಇಲ್ಲಿಗೆ ಸಲ್ಲಿಸಿದಾಗ **"ನಿಮ್ಮ ಖಾತೆ ಮುಕ್ತಾಯಗೊಂಡಿದೆ"** ಎಂಬ ಹಿಂಬರಹದೊಂದಿಗೆ ಹಿಂದಿರುಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಅದಕ್ಕೆ ಪೂರಕವಾಗಿ ಸದರಿ ಚೆಕ್ ಮತ್ತು ಬ್ಯಾಂಕಿನ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ.3. ಪಿರ್ಯಾದಿಯವರು ಸದರಿ ಬ್ಯಾಂಕ್ ನ ಹಿಂಬರಹಗಳನ್ನು ನಿಮ್ಮ ಗಮನಕ್ಕೆ ತಂದು ಚೆಕ್ ಹಣ ಕೋರಿ ನಿಗದಿತ ದಿನದೊಳಗೆ ಅಂದರೆ ದಿನಾಂಕಃ 21.03.2023 ರಂದು ನಿಮಗೆ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ನೋಟಿಸ್ ಕಳುಹಿಸಿದ್ದು, ಸದರಿ ನೋಟೀಸ್ ನಿಮ್ಮ ಸರಿಯಾದ ವಿಳಾಸಕ್ಕೆ ಕಳುಹಿಸಿದ್ದು, ನೀವು ಪಿರ್ಯಾದಿಯವರಿಗೆ ಕೊಡಬೇಕಾಗಿದ್ದ ಹಣವನ್ನು ಪಾವತಿ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಅದಕ್ಕೆ ಪೂರಕವಾಗಿ ವಕೀಲರ ನೋಟಿಸಿನ ಪ್ರತಿ, ಅಂಚೆ ರಶೀದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 4 ನಿಮ್ಮ ಪರವಾಗಿ ಸಾಕ್ಷಿ ಪುರಾವೆ ಇವೆಯಾ?
ಉತ್ತರಃ

ಪ್ರಶ್ನೆಃ 5 ನಿಮಗೆ ಈ ಕೇಸಿನಲ್ಲಿ ಏನಾದರೂ ಹೇಳುವುದು ಇದೆಯಾ?
ಉತ್ತರಃ

ಆರೋಪಿಯ ವಿರುದ್ಧ ಲಭ್ಯವಿರುವ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಆತ ನೀಡಿದ ಹೇಳಿಕೆಯನ್ನು ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ . .2024 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಸ್ಥಳಃ ಭದ್ರಾವತಿ ಜೆ.ಎಂ.ಎಫ್.ಸಿ., ಭದ್ರಾವತಿ .